**ಪತ್ರಿಕಾ ಪ್ರಕಟಣೆ**

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ಉಪ-ವಿಭಾಗ**

**ಸೂರ್ಯನಗರ ಪೊಲೀಸ್ ಠಾಣೆ**

# "ಭೂಗಳ್ಳತನ ಆರೋಪಿಗಳ ಬಂಧನ"

ದಿನಾಂಕ;-01/02/2021 ರಂದು ರಾತ್ರಿ 08-00 ಗಂಟೆಯ ಸಮಯದಲ್ಲಿ ಪಿರ್ಯಾದಿ ಪ್ರಕಾಶ್ ರೆಡ್ಡಿ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ಬೆಂಗಳೂರು ಜಿಲ್ಲೆ, ಸೂರ್ಯನಗರ ಪೊಲೀಸ್ ಠಾಣಾ ಸರಹದ್ದು, ಬನಹಳ್ಳಿ ಗ್ರಾಮದ ಸರ್ವೆ 99/03 ರ ಭೂ ಪರಿವರ್ತನಾ ವಾಸದ ನಿವೇಶನಗಳ ಸಂಖ್ಯೆ 401 ರಿಂದ 404 ಮತ್ತು 394 ನಿವೇಶನಗಳಲ್ಲಿ ನೊಂದಾಯಿತ ಕ್ರಮ ಪತ್ರದಂತೆ, ಸದರಿ ನಿವೇಶನಗಳ ಸಂಪೂರ್ಣ ಹಕ್ಕುದಾರರಾಗಿದ್ದು ಜಮೀನಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳು ಇದ್ದರೂ ಸಹ, ಈ ಜಮೀನನ್ನು ಪಾರ್ವತಿ ಕೋಂ ಮಹದೇವಯ್ಯ, ಶಿವಪ್ರಕಾಶ್ ರೆಡ್ಡಿ ಬಿನ್ ರಾಮಸ್ವಾಮಿರೆಡ್ಡಿ, ರಾಜಪ್ಪ ಬಿನ್ ಚೆನ್ನಪ್ಪ, ಮಂಜುನಾಥ ಬಿನ್ ಸೋಲೂರು ಮಂಜುನಾಥ, ಜಿಮ್ ಪ್ರವೀಣಾ @ ಪಪ್ಪು ರವರುಗಳು ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನಕಲಿ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ದಿನಾಂಕ:01/02/2021 ರಂದು ಜೆ.ಸಿ.ಬಿ. ಯಂತ್ರವನ್ನು ತೆಗೆದುಕೊಂಡು ಹೋಗಿ ಜಮೀನಿನಲ್ಲಿದ್ದ ಮನೆಗಳನ್ನು ಕೆಳಕ್ಕೆ ಕೆಡವಿ, ಪಿರ್ಯಾದಿಯ ಮೇಲೆ ಜೆ.ಸಿ.ಬಿಯನ್ನು ಹತ್ತಿಸಿ ಸಾಯಿಸಲು ಪ್ರಯತ್ನಿಸಿದ್ದು, ಇವರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ನೀಡಿದ ದೂರು ಮೇರೆಗೆ ಠಾಣಾ ಮೊ.ನಂ: 25/2021 ಕಲಂ: 143-147-427-504-506 ಜೊತೆಗೆ 149 ಐಪಿಸಿ ರೀತ್ಯ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿರುತ್ತೆ. ಈ ಬಗ್ಗೆ ಸ್ಥಳ ಪರಿಶೀಲನೆಗೆ ಬಂದ ಇಲಾಖೆಯ ಹಿರಿಯ ಅಧಿಕಾರಿಗಳು ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಕರಣದ ಆರೋಪಿ ಪತ್ತೆ ಬಗ್ಗೆ ಸೂರ್ಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವರಾದ ರವೀಂದ್ರ.ಎನ್ ರವರ ನೇತೃತ್ವದಲ್ಲಿ ತಂಡ ರಚನೆ ಮಾಡಿ ನಿಗಧಿತ ಅವಧಿಯೊಳಗೆ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸುವಂತೆ ಆದೇಶಿಸಿರುತ್ತಾರೆ.

ಪ್ರಕರಣದ ತನಿಖೆ ಮುಂದುವರೆಸಿ ದಿನಾಂಕ: 04/03/2021 ರಂದು ಸಂಜೆ ಸಮಯದಲ್ಲಿ ಬಂದ ಮಾಹಿತಿ ಮೇರೆಗೆ ಆರೋಪಿಯಾದ 1. ಮಂಜುನಾಥ @ ಸೋಲೂರು ಮಂಜು ಬಿನ್ ಮುನಿಸ್ವಾಮಿ, 48 ವರ್ಷ, ಪರಿಶಿಷ್ಠ ಜಾತಿ, ರಿಯಲ್ ಎಸ್ಟೇಟ್ ವ್ಯಾಪಾರ, ಮನೆ ನಂ: 309, ನಂಜುಂಡಪ್ಪ ಲೇಔಟ್, ಮಂಗಮ್ಮನಪಾಳ್ಯ, ಬೆಂಗಳೂರು ನಗರ ಮತ್ತು 2. ಪ್ರವೀಣ.ಎಂ.ಎನ್ ಬಿನ್ ಲೇಟ್ ನಾಗರಾಜು.ಎಂ.ಎನ್, 29 ವರ್ಷ, ಪರಿಶಿಷ್ಟ ಜಾತಿ, ಜಿಮ್ ಟ್ರೈನರ್ ಕೆಲಸ, ನಂ: 6, ಜೆ.ಆರ್ ಗ್ರೀನ್ ಪಾರ್ಕ್ ಲೇಔಟ್, ಮರಸೂರು ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ, ಸದರಿ ಆರೋಪಿಗಳನ್ನು ದಸ್ತಗಿರಿ ಮಾಡಿ ದಿನಾಂಕ: 05/03/2021 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಜೆ.ಸಿ.ಬಿ ಯಂತ್ರಗಳನ್ನು ವಶಪಡಿಸಿಕೊಂಡಿರುತ್ತೆ.

-: ದಸ್ತಗಿರಿ ಮಾಡಿರುವ ಆರೋಪಿಗಳ ವಿವರ :-

1. **ಮಂಜುನಾಥ @ ಸೋಲೂರು ಮಂಜು ಬಿನ್ ಮುನಿಸ್ವಾಮಿ, 48 ವರ್ಷ, ಪರಿಶಿಷ್ಟ ಜಾತಿ, ರಿಯಲ್ ಎಸ್ಟೇಟ್ ವ್ಯಾಪಾರ, ವಾಸ: ಮನೆ ನಂ: 309, ನಂಜುಂಡಪ್ಪ ಲೇಔಟ್, ಮಂಗಮ್ಮನಪಾಳ್ಯ, ಬೆಂಗಳೂರು ನಗರ**

2. **ಪ್ರವೀಣ.ಎಂ.ಎನ್ ಬಿನ್ ಲೇಟ್ ನಾಗರಾಜು.ಎಂ.ಎನ್, 29 ವರ್ಷ, ಪರಿಶಿಷ್ಟ ಜಾತಿ, ಜಿಮ್ ಟ್ರೈನರ್ ಕೆಲಸ, ವಾಸ: ನಂ: 6, ಜೆ.ಆರ್ ಗ್ರೀನ್ ಪಾರ್ಕ್ ಲೇಔಟ್, ಮರಸೂರು ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ,**

ಈ ಯಶಸ್ವಿ ಕಾರ್ಯಾಚರಣೆಯನ್ನು ಬೆಂಗಳೂರು ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಮಾನ್ಯ ಶ್ರೀ ರವಿ.ಡಿ.ಚನ್ನಣ್ಣನವರ್, ಐ.ಪಿ.ಎಸ್. ರವರ ನಿರ್ದೇಶನದ ಮೇರೆಗೆ, ಬೆಂಗಳೂರು ಜಿಲ್ಲೆ ಅಪರ ಪೊಲೀಸ್ ಅಧೀಕ್ಷಕರವರಾದ ಮಾನ್ಯ ಶ್ರೀ. ಕೆ.ಲಕ್ಷ್ಮಿಗಣೇಶ್, ಕೆ.ಎಸ್.ಪಿ.ಎಸ್. ಮತ್ತು ಆನೇಕಲ್ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕರವರಾದ ಮಾನ್ಯ ಡಾ||ಹೆಚ್.ಎಂ.ಮಹಾದೇವಪ್ಪ ರವರ ಮಾರ್ಗದರ್ಶನದಲ್ಲಿ, ಪಿ.ಐ. ಶ್ರೀ. ರವೀಂದ್ರ.ಎನ್ ಮತ್ತು ಸಿಬ್ಬಂದಿಯವರಾದ [1] ಎ.ಎಸ್.ಐ. ನಾಗರಾಜು.ಸಿ. [2] ಹೆಚ್.ಸಿ-530 ಸತೀಶ್, [3] ಹೆಚ್.ಸಿ-589 ನಟರಾಜು [4] ಹೆಚ್.ಸಿ-846 ಕೃಷ್ಣಮೂರ್ತಿ ರವರುಗಳನ್ನು ಒಳಗೊಂಡ ತಂಡವು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನ ಬಂಧಿಸಿ ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

(ರವಿ.ಡಿ.ಚನ್ನಣ್ಣನವರ್, ಐಪಿಎಸ್)
ಪೊಲೀಸ್ ಅಧೀಕ್ಷಕರು
ಬೆಂಗಳೂರು ಜಿಲ್ಲೆ